ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂ:ಸಸಂವಿ/ತಾಂ-1/ಮೊ.ಹೂ.ತ/2021-22

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 15-04-2021

ಇವರಿಗೆ,

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು

ವಿಷಯ: ರಸಗೊಬ್ಬರ, ಕೀಟನಾಶಕ ಮತ್ತು ಬೀಜ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘನೆಯ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲು ಪರಿವೀಕ್ಷಕರುಗಳಿಗೆ ತರಬೇತಿಯನ್ನು ಆಯೋಜಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲೆಗಳಲ್ಲಿ ಕೀಟನಾಶಕ, ಗೊಬ್ಬರ ಮತ್ತು ಬೀಜ ಮಾರಾಟ ಮಳಿಗೆಯಿಂದ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದಾಗ ಕಳಪೆ ಎಂದು ವರದಿಯಾಗಿರುವ ಪರಿಕರ ಮಾರಾಟಗಾರರು ಹಾಗೂ ತಯಾರಕರ ವಿರುದ್ಧ ಆಡಳಿತಾತ್ಮಕ ಹಾಗೂ ಕಾನೂನು ರೀತ್ಯ ಕ್ರಮಗಳನ್ನು ಜರುಗಿಸಲು ಹಲವು ಬಾರಿ ಸಭೆ, ವೀಡಿಯೋ ಕಾನ್ಫರೆನ್ಸ್ ಹಾಗೂ ಸುತ್ತೋಲೆಗಳ ಮೂಲಕ ಸೂಚನೆಯನ್ನು ನೀಡಲಾಗಿರುತ್ತದೆ.

ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡುವ ಸಂಬಂದ ಶ್ರೀ ಬಿ. ವೆಂಕಟರಮಣಪ್ಪ, ಉಪ ಕೃಷಿ ನಿರ್ದೇಶಕರು, ಜಾಗೃತ ಕೋಶ, ಬೆಳಗಾವಿ ವಿಭಾಗ, ಬೆಳಗಾವಿ ಇವರ ಹೆಚ್ಚು ಪರಿಣಿತಿ ಹೊಂದಿರುತ್ತಾರೆ. ಜಿಲ್ಲೆಗಳ ಎಲ್ಲಾ ಪರಿವೀಕ್ಷಕರುಗಳಿಗೆ ಮೊಕದ್ದಮೆ ಹೂಡಲು ತರಬೇತಿ /ಕಾರ್ಯಾಗಾರವನ್ನು ಶ್ರೀ ಬಿ. ವೆಂಕಟರಮಣಪ್ಪ ಇವರೊಂದಿಗೆ ಚರ್ಚಿಸಿ ದಿನಾಂಕ ಮತ್ತು ಸಮಯವನ್ನು ನಿಗಧಿಪಡಿಸಿ ದಿನಾಂಕ 15-05-2021 ರೊಳಗೆ ಆಯೋಜಿಸಲು ಈ ಮೂಲಕ ಸೂಚಿಸಿದೆ. ಮುಂದುವರೆದು ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳ ಮೊಕದ್ದಮೆಗಳನ್ನು ಕೂಡಲೇ ದಾಖಲಿಸಲು ಕ್ರಮ ವಹಿಸಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

15/04/21
ಕೃಷಿ ಆಯುಕ್ತರು

ಪ್ರತಿಯನ್ನು ಶ್ರೀ ಬಿ. ವೆಂಕಟರಮಣಪ್ಪ, ಉಪ ಕೃಷಿ ನಿರ್ದೇಶಕರು, ಜಾಗೃತ ಕೋಶ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಕಳುಹಿಸುತ್ತಾ, ಇಲಾಖೆಯ ಪರಿವೀಕ್ಷಕರುಗಳಿಗೆ ಮೊಕದ್ದಮೆ ಹೂಡಲು ಅವಶ್ಯವಿರುವ ತರಬೇತಿಯನ್ನು ನೀಡಲು ತಿಳಿಸಿದೆ.